**<u>ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಲಯ,</u>**

**<u>ಸಿರುಗುಪ್ಪ</u>**

**<u>ಸಿ.ಸಿ. ನಂ.100 /2020</u>**

**<u>ಸಿ.ಡಬ್ಲ್ಯೂಃ 11 ಪಿ.ಡಬ್ಲ್ಯೂಃ 6</u>**

| | | |
|---|---|---|
| ಸಾಕ್ಷಿದಾರನ ಹೆಸರು | : | ಗೋವಿಂದಪ್ಪ |
| ತಂದೆಯ ಹೆಸರು | : | ರಾಮಪ್ಪ |
| ವಯಸ್ಸು | : | 54 ವರ್ಷ |
| ಕೆಲಸ | : | ವ್ಯಾಪಾರ |
| ವಾಸ | : | ಸಿರುಗುಪ್ಪ |

**<u>ಸಾಕ್ಷಿಗೆ ದಿನಾಂಕಃ 16.03.2026 ರಂದು ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ</u>**

1. ಚಾಸಾ 10 ರವರು ಪರಿಚಯ ಇಲ್ಲ. ಆರೋಪಿ ನಂ 4 ಪರಿಚಯ ಇಲ್ಲ. ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜಕರಿಗೆ ಸಹಾಯವಾಗಿ ಸಾಕ್ಷ್ಯನುಡಿಯುತ್ತಿಲ್ಲ ಆದ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಗಿದೆ)**

## <u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>

2. ಆರೋಪಿ ನಂ 4 ನನ್ನ ಮಾಲೀಕತ್ವದ ವೈನ್ ಶಾಪ್ ನಲ್ಲಿ ವೆಂಡರ್ ಆಗಿ ಕೆಲಸ ಮಾಡುತ್ತಿದ್ದು ನಾನು ಲೆಕ್ಕವನ್ನು ಪರಿಶೀಲನೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ದಿಃ10.09.2019 ರಂದು ಆತನು ನನ್ನ ಬಳಿ ಬಂದು ತಾನು ದಿಃ 02.09.2019 ರಂದು ಆರೋಪಿ ನಂ 1 ಮತ್ತು 2 ರವರಿಗೆ ಎಳು ಬಾಕ್ಸ ಮದ್ಯವನ್ನು ಕೊಟ್ಟಿದ್ದು ಅದನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದಾಗ ಪೋಲಿಸರು ದಾಳಿ ಮಾಡಿ ಅವರನ್ನು ಹಿಡಿದು ಪಂಚನಾಮೆ ಮಾಡಿ ಪ್ರಕರಣದ ದಾಖಲಿಸಿರುವ ವಿಷಯವನ್ನು ತಿಳಿಸಿದನು ಎಂದರೆ ಸರಿಯಲ್ಲ. 4 ನೇ ಆರೋಪಿಯು ನನಗೆ ಗೊತ್ತಿಲ್ಲದೆ ಆರೋಪಿ ನಂ 1 ಮತ್ತು 2 ರವರಿಗೆ ಮದ್ಯವನ್ನು ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಈ ಬಗ್ಗೆ ನನಗೆ

ಈಗ ಓದಿ ಹೇಳಿದಂತೆ "ಹೀಗೆ ಏಳೆಂಟು ವರ್ಷಗಳಿಂದ.................ತಿಳಿದುಬಂದಿರುತ್ತದೆ" ಎಂದು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿಪಿಃ 9 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರವಾಗಿ : ಏನೂ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**